KLE Society's
# S. NIJALINGAPPA COLLEGE
II-Block, Rajajinagar, Bengaluru-10
*Re-accredited by NAAC at A+ grade with 3.53 CGPA*
*College with UGC-STRIDE Component – I*
*Phone: 080-23526055, 080-23325020, Fax 080-23320902*
*Website: www.klesnc.org* *E-mail: info@klesnc.org* *kleaccts@yahoo.com*

## 158ನೇ ವಿವೇಕಾನಂದ ಜಯಂತಿ

ದಿನಾಂಕ: 02–02–2021 ರಾಷ್ಟ್ರೀಯ ಯುವ ದಿನಾಚರಣೆ

ಸಮಯ : 3.00 ಗಂಟೆಗೆ

ಸಮಾರೋಪ ಸಮಾರಂಭ ಸ್ಥಳ : ಶಾರದಾ ಸಭಾಂಗಣ

### ಕಾರ್ಯಕ್ರಮ ಪಟ್ಟಿ

- ಪ್ರಾರ್ಥನೆ : ಸುಭದ್ರಾ, ಶ್ರದ್ಧಾ, ತನುಷಾ, ನಿತ್ಯಾ, ಹರ್ಷಿತ
- ಸ್ವಾಗತ ಮತ್ತು ಅತಿಥಿಗಳ ಪರಿಚಯ : ಪ್ರೊ. ಜಿ.ಎಸ್.ನಿಲುಗಲ್
- ಗೌರವ ಕಾಣಿಕೆ ಸಮರ್ಪಣೆ ಗೌರವ ಅತಿಥಿಗಳಿಗೆ : ಪ್ರಾಂಶುಪಾಲರಿಂದ
- ಯುವ ದಿನಾಚರಣೆಯ ವರದಿ : ಪ್ರೊ. ಜಿ.ಎಸ್. ನಿಲುಗಲ್‌ರಿಂದ
- ಬಹುಮಾನ ವಿತರಣೆ : ಮುಖ್ಯ ಅತಿಥಿಗಳಿಂದ
- ಮುಖ್ಯ ಅತಿಥಿಗಳ ಮಾತು : ಡಾ. ಅರವಿಂದ್ ಹೆಚ್.ಟಿ. ಸಿಂಡಿಕೇಟ್ ಸದಸ್ಯರು, ಬೆಂಗಳೂರು ನಗರ ವಿಶ್ವವಿದ್ಯಾಲಯ.
- ಅಧ್ಯಕ್ಷೀಯ ನುಡಿಗಳು : ಡಾ. ಎ. ಬಿ. ಸೋನಪ್ಪನವರ, ಪ್ರಾಂಶುಪಾಲರು.
- ವಂದನಾರ್ಪಣೆ : ಕು॥ ಸಂಜನಾ
- ಕಾರ್ಯಕ್ರಮ ನಿರ್ವಹಣೆ : ಕು॥ ಮೇಘನಾ ಹೆರಳೆ

KLE Society's S. Nijalingappa College Bengaluru 560 010

KLE Society's
S. NIJALINGAPPA COLLEGE
II-Block, Rajajinagar, Bengaluru-10
*Re-accredited by NAAC at A+ grade with 3.53 CGPA*
*College with UGC-STRIDE Component – I*
*Phone: 080-23526055, 080-23325020, Fax 080-23320902*
*Website: www.klesnc.org* *E-mail: info@klesnc.org* *kleaccts@yahoo.com*

**ಕೆಎಲ್‌ಇ ಸಂಸ್ಥೆಯ ಎಸ್. ನಿಜಲಿಂಗಪ್ಪ ಮಹಾವಿದ್ಯಾಲಯ, ರಾಜಾಜಿನಗರ, ಬೆಂಗಳೂರು**

**ಕನ್ನಡ ವಿಭಾಗ**

02–02–2021

**158 ನೇ ವಿವೇಕಾನಂದ ಜಯಂತಿ**

**ರಾಷ್ಟ್ರೀಯ ಯುವ ದಿನಾಚರಣೆ**

**ಸಮಾರೋಪ ಸಮಾರಂಭ**

ಪ್ರಪಂಚದ ಸಮಸ್ತ ಯುವ ಜನಾಂಗದ ಪ್ರತೀಕರಾಗಿದ್ದ ವೀರಸನ್ಯಾಸಿ ಸ್ವಾಮಿ ವಿವೇಕಾನಂದರ ಜೀವನಾದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದು ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಡಾ. ಅರವಿಂದ ಹೆಚ್.ಟಿ. ಅವರು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕೆಎಲ್‌ಇ ಸಂಸ್ಥೆಯ ಎಸ್. ನಿಜಲಿಂಗಪ್ಪ ಮಹಾವಿದ್ಯಾಲಯದಲ್ಲಿ ದಿನಾಂಕ 02.02.2021 ರಂದು ಸ್ವಾಮಿ ವಿವೇಕಾನಂದರ 158 ನೇ ಜಯಂತಿ ಪ್ರಯುಕ್ತ ರಾಷ್ಟ್ರೀಯ ಯುವ ದಿನಾಚರಣೆಯ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು.

ವಿಶ್ವವಿಜೇತ ವಿವೇಕಾನಂದರು ಭಾರತದ ಆಧ್ಯಾತ್ಮಿಕ, ಧಾರ್ಮಿಕ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದರು. ವಿಶ್ವದ ವಿವೇಕವನ್ನು ವಿಸ್ತರಿಸಿದ ವಿವೇಕಾನಂದರು, ಪ್ರತಿಯೊಬ್ಬ ವ್ಯಕ್ತಿಯೂ ತಮ್ಮ ಜೀವನದಲ್ಲಿ ಚಾರಿತ್ರ್ಯ ನಿರ್ಮಾಣಕ್ಕೆ ಮಹತ್ವ ಕೊಡಬೇಕು. ನಮ್ಮ ದೇಶದ ಯುವಕರು ವಿವೇಕಾನಂದರನ್ನು ಪ್ರೇರಣೆಯಾಗಿಟ್ಟುಕೊಂಡು ಮುನ್ನಡೆದಾಗ ಮಾತ್ರ ದೇಶ ಉನ್ನತಿ ಸಾಧಿಸಲು ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಅರುಣಕುಮಾರ್ ಬಿ. ಸೋನಪ್ಪನವರ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ತನಗಾಗಿ ತನ್ನ ಕುಟುಂಬಕ್ಕಾಗಿ ಸ್ವಾರ್ಥದಿಂದ ಇದ್ದವರನ್ನು ಈ ಸಮಾಜ ಎಂದೂ ನೆನಪಿಟ್ಟುಕೊಳ್ಳುವುದಿಲ್ಲ. ನಿಸ್ವಾರ್ಥದಿಂದ ಸಮಾಜಕ್ಕಾಗಿ, ದೇಶಕ್ಕಾಗಿ ಶ್ರಮಿಸಿದ ಧೀಮಂತ ನಾಯಕರನ್ನು, ಆದರ್ಶ ಪುರುಷರನ್ನು ಸ್ಮರಿಸಿಕೊಳ್ಳಲಾಗುತ್ತದೆ. ಈ ಹಿನ್ನೆಲೆಯಲ್ಲಿ ವಿವೇಕಾನಂದರನ್ನು ಯುವದಿನದ ನೆನಪಿನಲ್ಲಿ ಸ್ಮರಿಸಿಕೊಳ್ಳುತ್ತಿರುವುದು ಔಚಿತ್ಯಪೂರ್ಣವಾಗಿದೆ. ಪ್ರತಿಯೊಬ್ಬರೂ ಸಮಾಜದಿಂದ ಬೆಳೆದು ಸಮಾಜಕ್ಕೆ ಸೇವೆ ಸಲ್ಲಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ವಿವೇಕಾನಂದ ಜಯಂತಿ ಪ್ರಯುಕ್ತ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಐಕ್ಯೂಎಸಿ ಸಂಯೋಜಕರಾದ ಡಾ. ಮಹಾನಂದ ಚಿತ್ತವಾಡಗಿ, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ನಾಗಿರೆಡ್ಡಿ, ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಜಿ.ಎಸ್. ನಿಲುಗಲ್ ಅವರು ವೇದಿಕೆ ಮೇಲೆ ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರಾದ ಸುಭದ್ರಾ, ಶ್ರದ್ಧಾ, ತನುಷಾ, ತನುಷಾ, ನಿತ್ಯಾ, ಹರ್ಷಿತಾ ಪ್ರಾರ್ಥಿಸಿದರು. ಮುಖ್ಯಸ್ಥರಾದ ಪ್ರೊ. ಜಿ.ಎಸ್. ನಿಲುಗಲ್ ಅವರು ಸ್ವಾಗತಿಸಿ, ಪರಿಚಯಿಸಿದರು.

ಕು. ಸಂಜನಾ ಅವರು ವಂದಿಸಿದರು. ಕು. ಮೇಘನಾ ಹೆರಳೆ ಅವರು ಕಾರ್ಯಕ್ರಮ ನಿರ್ವಹಿಸಿದರು. ಮಹಾವಿದ್ಯಾಲಯದ ಎಲ್ಲಾ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

Head of the Kannada Dept.
KLE Society's S. Nijalingappa College
II Block, Rajajinagar, Bangalore-560 010

KLE Society's S. Nijalingappa College Bengaluru 560 010

Principal
KLE Society's S. Nijalingappa College
Rajajinagar, Bangalore-560 010